



- ಮೇ ಸಂಚಿಕೆ ಮುದ ನೀಡಿತು. ಶಶಿಕಲಾ ಬಾಯಾರು ಅವರ 'ಪರಾವರ್ತನ' ಕತೆ ಮೇಲ್ನೋಟಕ್ಕೆ ಸರಳವಾಗಿ ಕಂಡುಬಂದರೂ, ಕತೆಯ ನಡುನಡುವೆ ಬರುವ ಸಾರ್ವತ್ರಿಕ ಸತ್ಯಗಳು ಮೂರು ತಲೆಮಾರುಗಳಿಗೆ ಸಂಪರ್ಕ ಕಲ್ಪಿಸುತ್ತವೆ. ಬಸವರಾಜ ಸಾದರ ಅವರ ಕತೆ 'ಆಡಿಟ್ ರಿಪೋರ್ಟ್'ನ ಕಥಾವಸ್ತು ಹಳೆಯದೆನಿದರೂ ಶೈಲಿ ಹಿಡಿಸಿತು.

**ಬಿ.ಆರ್. ಅಣ್ಣಾಸಾಗರ, ಸೇಡಂ**

- ಬಸವರಾಜ್ ಸಾದರ್ ಅವರ ಕತೆ 'ಆಡಿಟ್ ರಿಪೋರ್ಟ್' ತನ್ನ ಸರಳ ನಿರೂಪಣೆಯಿಂದ ಸರ್ಕಾರಿ ಕಚೇರಿಗಳಲ್ಲಿ ಬೇರು ಬಿಟ್ಟಿರುವ ಅಧಿಕಾರ ಶಾಹಿಯ ವಿವೇಚನಾರಹಿತ 'ಅಹಂ' ಅನ್ನು ಎಳೆ ಎಳೆಯಾಗಿ ಬಿಡಿಸಿಟ್ಟಿದೆ.

**ಆರ್.ಟಿ. ಶರಣ್, ಕಲಬುರಗಿ**

- 'ದೇಹದಾನ' (ಬನವಾಸಿ ವೆಂಕಟೇಶ ದೀಕ್ಷಿತ್), 'ರಾಧೆಯ ಗೀತ ಗೋವಿಂದ' (ಸ. ರಘುನಾಥ್) ಕತೆಗಳು ಧ್ವನಿಪೂರ್ಣವಾಗಿವೆ. ಹೇಮಾ ಎಸ್. ಅನುವಾದಿಸಿರುವ ಜಪಾನಿ ಲೇಖಕ ಹರುಕಿ ಮುರಕಮಿಯ ಸಂದರ್ಶನ ಅತ್ಯುತ್ತಮವಾಗಿದೆ.

**ಸುರೇಶ್ ಜಿ.ಎನ್. ನಾಗಮಂಗಲ**

- 'ರಾನಾ ರಾಕಾ' (ಬಂಗಾಳಿ ಮೂಲ: ರಾಬಿಯಾ ಖಾತುನ್) ವಿಶಿಷ್ಟವಾಗಿದೆ. ಮಕ್ಕಳ ಮೇಲೆ ಕುಟುಂಬದವರ ನಡವಳಿಕೆ ಎಂತಹ ಪ್ರಭಾವ ಬೀರುತ್ತದೆ ಎನ್ನುವುದನ್ನು ಮಾರ್ಮಿಕವಾಗಿ ಚಿತ್ರಿಸಲಾಗಿದೆ.

**ಗಿರೀಶ್ ಕೆ., ಸಾಗರ**

- ವಸುಮತಿ ಉಡುಪ ಅವರ 'ಪುಕಾರು' ಕತೆ ಚೆನ್ನಾಗಿದೆ. ಕೊರೊನಾ ನಂತರದ ಜನಜೀವನದ ಚಿತ್ರಣ ಸೊಗಸಾಗಿ ಮೂಡಿಬಂದಿದೆ. ವೃದ್ಧಾಪ್ಯದ ಮಾನಸಿಕ ತುಮುಲಗಳನ್ನು ಬಹಳ ಚೆನ್ನಾಗಿ ವಿಶ್ಲೇಷಿಸಲಾಗಿದೆ.

**ಪಿ.ಎಚ್. ಪಾಟೀಲ್, ರಾಣೆಬೆನ್ನೂರ,**
**ಆರ್.ಕೆ. ಮಿಜಾರ್, ಮೂಡುಬಿದಿರೆ,**
**ಪಿ. ಜಯವಂತ ಪೈ, ಕುಂದಾಪುರ**

- ಒರಳು(ಕಲ್ಲು): ಒಂದು ಹೊರಳು (ಅರುಣಾ ಕೆ.ಆರ್.) ಪ್ರಬಂಧ ತುಂಬಾ ಮಾಹಿತಿಯನ್ನು ಮೊಗೆದು ಕೊಟ್ಟಿದೆ. 'ಅಂಗೈಯಲ್ಲಿ ಅರಮನೆ', 'ಬುತ್ತಿ ಚಿಗುರು' ಬರಹಗಳು ಕಚಗುಳಿ ಇಡುತ್ತವೆ.

**ಚನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ**

- 'ಮಡಿಕೋಲು ಮೀಮಾಂಸೆ ' (ಶಾಂತಾ ನಾಗಮಂಗಲ) ಪ್ರಬಂಧ ಖುಷಿಕೊಟ್ಟಿತು. ನಮ್ಮ ಮನೆಯಲ್ಲಿಯೂ ಮಡಿಕೋಲಿದೆ. ಬಟ್ಟೆಗಳನ್ನು ಒಣಹಾಕಲು ಬಳಸುತ್ತಿದ್ದೆವು. ಈಗ ಮೂಲೆ ಸೇರಿ ಮೌನವಾಗಿದೆ. ಆದರೆ, ಅದರ ನೆನಪುಗಳು ಅನಂತ.

**ಸುಬ್ಬಲಕ್ಷ್ಮಿ ಎಚ್.ಕೆ., ಕೋಲಾರ**

**ತಿದ್ದುಪಡಿ**

ಜೂನ್ ಸಂಚಿಕೆಯ 'ಸ್ಮೃತಿಬಿಂಬ' ಶೀರ್ಷಿಕೆಯಲ್ಲಿ ಪ್ರಕಟವಾದ ಚಿತ್ರದ ಅಡಿಟಿಪ್ಪಣಿಯಲ್ಲಿ, ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಚದುರಂಗ ಎಂಬುದು ಕಾದಂಬರಿಕಾರ ಚದುರಂಗ ಎಂದಾಗಬೇಕು. ಆ ಸಂದರ್ಭದಲ್ಲಿ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದವರು ಬರಗೂರು ರಾಮಚಂದ್ರಪ್ಪ.

–ಸಂ